# ರಾಜತಂತ್ರ



ಬಹುಕಾಲದ ಹಿಂದೆ ಸ್ವರ್ಣಪುರಿಯಲ್ಲಿ ಕೀರ್ತಿವರ್ಮನೆಂಬ ರಾಜನು ರಾಜ್ಯವಾಳುತ್ತಿದ್ದನು. ಆತನು ಮಹಾ ಶೂರ, ಪರಾಕ್ರಮಿ, ದೈವಭಕ್ತನಾಗಿದ್ದನು. ಪ್ರಜೆಗಳ ಪಾಲಿಗೆ ತಂದೆಯಂತೆಯೇ ಇದ್ದನು. ಆದರೆ ಆತನಿಗೆ ಗಂಡುಮಕ್ಕಳಿರಲಿಲ್ಲ. ಒಬ್ಬಳೇ ಮಗಳು. ಆಕೆಯನ್ನು ಒಬ್ಬ ಶೂರ, ಪರಾಕ್ರಮಿ ಪ್ರಜಾಪಾಲಕ ರಾಜಕುಮಾರನಿಗೆ ಕೊಟ್ಟು ಮದುವೆ ಮಾಡಬೇಕೆಂದು ನಿಶ್ಚಯಿಸಿದನು. ಆದರೆ ಮಹಾರಾಣಿಯು ತನ್ನ ತಮ್ಮನಿಗೇ ಮಗಳನ್ನು ಕೊಟ್ಟು ಮದುವೆ ಮಾಡಬೇಕೆಂದು ಹಟ ಹಿಡಿದಿದ್ದಳು. ಆದರೆ ರಾಣಿಯ ತಮ್ಮ ಶೂರವರ್ಮ ವಯಸ್ಸಿಗೆ ಬಂದಿದ್ದನೇ ಹೊರತು ಪ್ರಜಾವಾತ್ಸಲ್ಯ, ದೈವಭಕ್ತಿ, ರಾಜಭಕ್ತಿ ಎಳ್ಳಷ್ಟೂ ಇರಲಿಲ್ಲ.

ಇದೇ ಚಿಂತೆಯಲ್ಲಿಯೇ ರಾಜ ಹಾಸಿಗೆ ಹಿಡಿದ. ಬಹಳ ಕಾಲ ಮೇಲೆ ಏಳಲೇ ಇಲ್ಲ. ರಾಜಗುರುಗಳನ್ನು ಕರೆಸಿ ವಿಚಾರಿಸಲಾಗಿ 'ಇದು ಸಾಮಾನ್ಯ ಕಾಯಿಲೆ ಅಲ್ಲ ಪ್ರಭು. ಔಷಧೋಪಚಾರದಿಂದ ವಾಸಿಯಾಗುವುದೂ ಇಲ್ಲ. ಇದಕ್ಕೆ ಒಂದೇ ಒಂದು ಅನುಪಾನವಿದೆ' ಎಂದರು. ಮಹಾರಾಣಿ 'ಹೇಳಿ ಪೂಜ್ಯರೇ ಅದೇನೆ ಆಗಲಿ ನಾನು ನೆರವೇರಿಸುತ್ತೇನೆ' ಎಂದು ನುಡಿದಳು. ರಾಜಗುರುಗಳು ಯೋಚಿಸಿ 'ನೋಡಿ ತಾಯಿ ಈ ಕಾಯಿಲೆಗೆ ಬಲಿ ಅವಶ್ಯಕ. ಒಬ್ಬ ಸುಂದರ, ಶೂರ, ದೈವಭಕ್ತ ಅವಿವಾಹಿತ ರಾಜಕುಮಾರನನ್ನು ಬಲಿಕೊಟ್ಟರೆ...' ಎಂದರು. ಮಹಾರಾಣಿ 'ಆಯ್ತುಬಿಡಿ ಅದೇ ನಡೆಸೋಣ. ಮಹಾರಾಜರು ಗುಣಮುಖರಾದರೆ ಅಷ್ಟೇ ಸಾಕು' ಎಂದಳು.

ಅಂದು ಸಂಜೆ ಮಹಾರಾಣಿ ತನ್ನ ತಮ್ಮ ಶೂರವರ್ಮನನ್ನು ಏಕಾಂತದಲ್ಲಿ ಸಂಧಿಸಿ 'ನೋಡು ತಮ್ಮ, ಈ ಬಲಿಯಿಂದ ಮಹಾರಾಜರು ಗುಣಮುಖರಾಗುತ್ತಾರೆ. ಏನಾದರೂ ಮಾಡು' ಎಂದಳು. ಗಹಗಹಿಸಿ ನಕ್ಕ ಶೂರವರ್ಮ 'ಅಕ್ಕಾ ಇದೆಲ್ಲಾ ಮೂಢನಂಬಿಕೆ. ಕಾಯಿಲೆಗೂ ಬಲಿಗೂ ಏನು ಸಬಂಧವಿಲ್ಲ. ಅದೂ ಅಲ್ಲದೆ ಯಾವ ರಾಜಕುಮಾರ ಬಲಿಗೆ ಸಿದ್ಧನಾಗುತ್ತಾನೆ. ನೀನು ಸುಮ್ಮನೆ ಇದ್ದುಬಿಡು' ಎಂದನು. ನೊಂದ ಮಹಾರಾಣಿ 'ನೋಡು ನನಗೆ ಕುಂಕುಮಭಾಗ್ಯ ಮುಖ್ಯ. ನಿನ್ನನ್ನು ಬೇಡಿಕೊಳ್ಳುತ್ತೇನೆ. ಏನಾದರೂ ಮಾಡು' ಎಂದಳು.

'ಅಯ್ಯೋ ಅಕ್ಕಾ ನಾನು ಬಲಿ ಹುಡುಕುವುದು, ಅವರು ಬದುಕುವುದು ಬರೀ ಕನಸು. ನನಗೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ನೀನು ಏನು ಬೇಕಾದರೂ ಮಾಡಿಕೊ' ಎಂದು ಹೇಳಿ ಅರಮನೆಯಿಂದ ಹೊರಟು ಹೋದನು.

ಮಾರನೆಯ ದಿನ ಒಬ್ಬ ರಾಜಕುಮಾರ ಅರಮನೆಗೆ ಬಂದು 'ಮಹಾಪ್ರಭು ನಾನು ಬಲಿಗೆ ಸಿದ್ಧನಾಗಿದ್ದೇನೆ. ನನಗೆ ರಾಜ್ಯ–ರಾಜಮನೆತನಕ್ಕಿಂತ ನನ್ನ ಪ್ರಾಣ ಮುಖ್ಯವಲ್ಲ. ರಾಜ ಪ್ರತ್ಯಕ್ಷ ದೇವತೆ ಅಂತಾರೆ. ಅವರು ಬದುಕಿದ್ದರೆ ಅವರ ನೆರಳಿನಲ್ಲಿ ಪ್ರಜಾಕೋಟಿ ಸುಖಶಾಂತಿಯಿಂದ ಬಾಳುತ್ತದೆ. ನನ್ನನ್ನು ಬಲಿ ಕೊಡಿ' ಎಂದು ಖಡ್ಗ ಒಪ್ಪಿಸಿ ತಲೆಬಾಗಿ ನಿಂತನು. ಸಂಜೆಯ ವೇಳೆಗೆ ಅರಮನೆಯ ಮುಂಭಾಗದಲ್ಲಿ ಬಲಿಗೆ ಸಿದ್ಧವಾಯಿತು. ಇದನ್ನು ನೋಡಲು ಸಹಸ್ರಾರು ಜನ ಸೇರಿದರು. ರಾಜಕುಮಾರ 'ನಮ್ಮ ಮಹಾರಾಜರಿಗೆ ಆಯಸ್ಸು ಆರೋಗ್ಯ ಕೊಡಲಿ' ಎಂದು ತಲೆಬಾಗಿದನು. ವಧೆಗಾರ ಕತ್ತಿ ಎತ್ತಿ ತಲೆ ಕತ್ತರಿಸಲು ಉದ್ಯುಕ್ತನಾದ. ಅಷ್ಟರಲ್ಲಿ ಎದುರಿಗಿದ್ದ ರಾಜಗುರುಗಳು 'ನಿಲ್ಲು ನಿಲ್ಲು. ಇಂತಹ ಮಹಾವೀರ ಕತ್ತಿಗೆ ಬಲಿ ಆಗಬಾರದು. ಅಗೋ ನೋಡು ಮಹಾರಾಜರು ಗುಣಮುಖರಾಗಿದ್ದಾರೆ' ಎಂದರು. ಅಲ್ಲಿಗೆ ಆಗಮಿಸಿದ ಮಹಾರಾಜರು 'ಮಹಾವೀರ' ನಿಜವಾದ ವೀರನೆಂದರೆ ನೀನೆ. ಈ ರಾಜ್ಯಕ್ಕೆ ಬೇಕಾಗಿರುವುದು ನಿನ್ನ ಬಲಿಯಲ್ಲ, ನಿನ್ನ ಸೇವೆ. ಯಾರು ನೀನು ಮಹಾವೀರ?' ಎಂದು ಕೇಳಿದರು. ಶೂರ ತಲೆಗೆ ಬಿಗಿದ ಬಟ್ಟೆಯನ್ನು ಸರಿಸಿ ರಾಜರ ಮುಂದೆ ತಲೆಬಾಗಿ ನಿಂತನು. ಆಶ್ಚರ್ಯ! ಆತನು ಬೇರೆ ಯಾರೂ ಅಲ್ಲ, ಮಹಾಮಂತ್ರಿಗಳ ಪುತ್ರ ಜಯಸಿಂಹ. ಮಹಾರಾಜರು ಆತನನ್ನು ಅಪ್ಪಿಕೊಂಡು 'ನನಗೆ ಯಾವ ಕಾಯಿಲೆಯೂ ಇಲ್ಲ. ರಾಜ್ಯಕ್ಕೆ ಉತ್ತಮ ಆಡಳಿತಗಾರನನ್ನು ಹುಡುಕಲು ನಾನು ಮತ್ತು ರಾಜಗುರುಗುಳು ಸೇರಿ ಆಡಿದ ನಾಟಕ. ನನ್ನ ಮಗಳನ್ನು ಕೊಟ್ಟು ಮದುವೆ ಮಾಡಿ ರಾಜ್ಯದ ಜವಾಬ್ದಾರಿ ನಿನಗೆ ಹೊರಿಸುತ್ತೇನೆ' ಎಂದರು. ನೆರೆದ ಜನ 'ಮಹಾರಾಜರಿಗೆ ಜಯವಾಗಲಿ. ಶೂರ ಜಯಸಿಂಹರವರಿಗೆ ಜಯವಾಗಲಿ' ಎಂದು ಜಯಘೋಷ ಮಾಡಿದರು. ಇದನ್ನು ಕಂಡ ಮಂತ್ರಿಗಳ ಕಣ್ಣಲ್ಲಿ ಆನಂದಭಾಷ್ಪ ಉದುರಿತು.

**–ವಿ. ಸತ್ಯನಾರಾಯಣ ರಾವ್, ಯಲಹಂಕ**